ಪಿಡಬ್ಲ್ಯೂ-1, ಪಿ.ಸಿ.ಆರ್. ನಂ.231-2025

ಸಾಕ್ಷಿಗೆ ಸತ್ಯಪ್ರತಿಜ್ಞೆ ಮಾಡಿಸಲಾಯಿತು.
ದಿನಾಂಕಃ 29-04-2026

ಸಾಕ್ಷಿಯ ಹೆಸರುಃ ಆನಂದ
ತಂದೆಯ ಹೆಸರುಃಅಂಜಿನಪ್ಪ
ವೃತ್ತಿಃ ವ್ಯವಸಾಯ
ವಾಸಃ ಬಿಡಿಗಾನಹಳ್ಳಿ

ಸ್ವಪ್ರಮಾಣೀಕೃತ **ಹೇಳಿಕೆಃ**

ದಿನಾಂಕ 25-04-2019 ರಂದು ಗೊಬ್ಬರ ತರಲು ಚನ್ನರಾಯಪಟ್ಟಣಕ್ಕೆ ಹೋಗಿದ್ದ, ಆಗ

ಒಂದು ಟೀ ಅಂಗಡಿಯಲ್ಲಿ ನನ್ನೊಂದಿಗೆ ಇದ್ದ ನನ್ನ ವಾಹನ ದಾಖಲಾತಿಗಳು, ಕಾವೇರಿ ಗ್ರಾಮೀಣ ಬ್ಯಾಂಕಿನ ಒಂದು ಚೆಕ್ ಬುಕ್ ಕಳೆದು ಹೋಯಿತು. ಅದೇ ದಿನ ಮಧ್ಯಾಹ್ನ 1 ಗಂಟೆ ಸಮಯದಲ್ಲಿ ನನ್ನ ದಾಖಲಾತಿಗಳನು ಕಳೆದು ಹೋಗಿರುವ ಬಗ್ಗೆ ನನಗೆ ತಿಳಿಯಿತು. ಕೂಡಲೇ ನಾನು ಚೆನ್ನರಾಯಪಟ್ಟಣ ಪೋಲಿಸ್ ಠಾಣೆಗೆ ಹೂಗಿ ಈ ಬಗ್ಗೆ ದೂರು ನೀಡಿರುತ್ತೇನೆ. ಸ್ವಲ್ಪ ದಿನಗಳು ಕಳೆದ ನಂತರವೂ ನನಗೆ ನನ್ನ ಕಳೆದುಹೋಗಿರುವ ದಾಖಲಾತಿಗಳು ಸಿಕ್ಕಿರುವುದಿಲ್ಲ ಹಾಗೂ ದೊಡ್ಡ ಬಳ್ಳಾಪುರ ನ್ಯಾಯಾಲಯದಿಂದ ನನಗೆ ನೋಟಿಸ್ ಬಂದಿರುತ್ತದೆ. ಸದರಿ ನೋಟಸಿನ ಮೂಲಕ ನಾನು ಒಂದು ಲಕ್ಷ ಹಣವನ್ನು ಪಡೆದುಕೊಂಡಿದ್ದೇನೆ ಎಂಬ ರೀತಿ ನನ್ನ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿದ್ದಾರೆ ಎಂದು ತಿಳಿಯಿತು. ಆ ರೀತಿ ಪ್ರಕರಣ ದಾಖಲು ಮಾಡಿರವ ವ್ಯಕ್ತಿ ಯಾರೆಂದು ನನಗೆ ತಿಳಿದಿಲ್ಲ. ಈ ಬಗ್ಗೆ ನಾನು ಪೋಲಿಸ್ ಠಾಣೆಯಲ್ಲಿ ಹಾಗೂ ಎಸ್‌ಪಿ ರವರ ಕಛೇರಿಗೆ ದೂರು ನೀಡಿದ್ದರು ಸಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆ ಕಾರಣ ನನಗೆ ನ್ಯಾಯ ಕೂಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮುಂದುವರಿದ ಸ್ವಪ್ರಾಮಾಣಿಪಿಕೃತ ಹೇಳಿಕೆಗೆ ಕಾಲಾವಾಶ ಕೋರಿದ್ದು, ನೀಡಲಾಯಿತು)

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ದೇವನಹಳ್ಳಿ